# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : | 229 |
| ಸದಸ್ಯರ ಹೆಸರು : | ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ : | 11.07.2018 |
| ಉತ್ತರಿಸುವವರು : | ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು |

******

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಅರಣ್ಯ ಪ್ರದೇಶಗಳಲ್ಲಿ ವಾಸವಾಗಿರುವ ಕೂಲಿ ಕಾರ್ಮಿಕರಿಗೆ ಹಕ್ಕುಪತ್ರ ನೀಡಬೇಕೆಂಬ ಬೇಡಿಕೆಯನ್ನು ಪೂರೈಸದೆ ಇರಲು ಕಾರಣಗಳೇನು; ಎಷ್ಟು ಅನಧಿಕೃತ ಕುಟುಂಬಗಳು ಅರಣ್ಯ ಪ್ರದೇಶದಲ್ಲಿ ವಾಸವಾಗಿದ್ದಾರೆ;(ವಿವರ ನೀಡುವುದು) | ಅರಣ್ಯ (ಸಂರಕ್ಷಣಾ) ಕಾಯ್ದೆ 1980ರ ಪ್ರಕಾರ ಯಾವುದೇ ಅರಣ್ಯ ಪ್ರದೇಶದಲ್ಲಿ ಹಕ್ಕು ಪತ್ರ ನೀಡಲು ಅವಕಾಶ ಇರುವುದಿಲ್ಲ. ಮುಂದುವರೆದು ಕರ್ನಾಟಕ ಅರಣ್ಯ ಕಾಯ್ದೆ 1963 ಮತ್ತು ಅರಣ್ಯ ನಿಯಮ 1969 ರಲ್ಲಿ ಕೂಡ ಅರಣ್ಯ ಪ್ರದೇಶಗಳಲ್ಲಿ ಕೂಲಿ ಕಾರ್ಮಿಕರಿಗೆ ಹಕ್ಕು ಪತ್ರ ನೀಡಲು ಅವಕಾಶವಿರುವುದಿಲ್ಲ.<br><br>ಆದಾಗ್ಯೂ, ಅರಣ್ಯ ಭೂಮಿಯಲ್ಲಿ 2005 ರ ಡಿಸೆಂಬರ್ 13 ಕ್ಕೆ ಮುಂಚಿತವಾಗಿ ವಾಸಿಸುತ್ತಿರುವ ಪರಿಶಿಷ್ಟ ಪಂಗಡದವರಿಗೆ ಮತ್ತು ಮೂರು ತಲೆಮಾರಿಗಿಂತ ಹಿಂದಿನಿಂದ ಅಥವಾ 75 ವರ್ಷಗಳಿಗಿಂತ ಹಿಂದಿನಿಂದಲೂ ವಾಸಿಸುತ್ತಿರುವ ಇತರೆ ವರ್ಗದ ಜನರಿಗೆ ಅನುಸೂಚಿತ ಬುಡಕಟ್ಟುಗಳು ಹಾಗೂ ಇತರೆ ಪಾರಂಪರಿಕ ಅರಣ್ಯ ವಾಸಿಗಳ ಅಧಿನಿಯಮ 2006 (2007 ರ ಕ್ರ.ಸಂ-2) ಮತ್ತು ನಿಯಮ-2008 ಮತ್ತು ತಿದ್ದುಪಡಿ 2012 ರಡಿಯಲ್ಲಿ ಹಕ್ಕು ಪತ್ರವನ್ನು ನೀಡಲಾಗುತ್ತಿದೆ.<br><br>ರಾಜ್ಯದಲ್ಲಿ ಅನಧಿಕೃತವಾಗಿ ಅರಣ್ಯ ಪ್ರದೇಶದಲ್ಲಿ ಒತ್ತುವರಿ ಮಾಡಿಕೊಂಡ 88384 ಪ್ರಕರಣಗಳು (ಕುಟುಂಬಗಳು) ಇದ್ದು, ವಿವರ ಈ ಕೆಳಗಿನಂತಿವೆ: |

| ಕ್ರ ಸಂ: | ವೃತ್ತ | ವಿಭಾಗ | ಪ್ರಕರಣಗಳ ಸಂಖ್ಯೆ |
|---|---|---|---|
| 1) | ಬೆಂಗಳೂರು | ಬೆಂಗಳೂರು ನಗರ | 456 |
| | | ಬೆಂಗಳೂರು ಗ್ರಾಮಾಂತರ | 810 |
| | | ರಾಮನಗರ | 4424 |
| | | ಕೋಲಾರ | 1565 |
| | | ಚಿಕ್ಕಬಳ್ಳಾಪುರ | 892 |
| | | ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ | 1018 |
| 2) | ಬೆಳಗಾವಿ | ಬೆಳಗಾವಿ | 514 |
| | | ಗೋಕಾಕ | 39 |
| | | ಬಾಗಲಕೋಟೆ | 1466 |
| 3) | ಬಳ್ಳಾರಿ | ಬಳ್ಳಾರಿ | 1483 |
| | | ಚಿತ್ರದುರ್ಗ | 30 |
| | | ದಾವಣಗೆರೆ | 139 |

| | | | | | |
|---|---|---|---|---|---|
| | | | | ಕೊಪ್ಪಳ | 10 |
| | | 4) | ಚಾಮರಾಜನಗರ | ಕಾವೇರಿ ವನ್ಯಜೀವಿ | 1895 |
| | | 5) | ಚಿಕ್ಕಮಗಳೂರು | ಚಿಕ್ಕಮಗಳೂರು | 1502 |
| | | | | ಕೊಪ್ಪ | 6658 |
| | | | | ಭದ್ರಾ ಹುಲಿ ಯೋಜನೆ | 20 |
| | | 6) | ಕೊಡಗು | ಮಡಿಕೇರಿ | 3178 |
| | | | | ವಿರಾಜಪೇಟೆ | 590 |
| | | | | ವನ್ಯಜೀವಿ ಮಡಿಕೇರಿ | 21 |
| | | 7) | ಧಾರವಾಡ | ಧಾರವಾಡ | 54 |
| | | | | ಗದಗ | 1127 |
| | | | | ಹಾವೇರಿ | 547 |
| | | 8) | ಹಾಸನ | ಹಾಸನ | 873 |
| | | | | ತುಮಕೂರು | 406 |
| | | 9) | ಕಲಬುರುಗಿ | ಕಲಬುರುಗಿ | 396 |
| | | | | ಬೀದರ್ | 365 |
| | | | | ರಾಯಚೂರು | 59 |
| | | | | ಯಾದಗಿರಿ | 661 |
| | | 10) | ಕೆನರಾ | ಶಿರಸಿ | 234 |
| | | | | ಹಳಿಯಾಳ | 212 |
| | | | | ಯಲ್ಲಾಪುರ | 1214 |
| | | | | ಕಾರವಾರ | 262 |
| | | | | ಹೊನ್ನಾವರ | 493 |
| | | | | ಕಾಳಿ ಹುಲಿ ಸಂರಕ್ಷಿತ ಪ್ರದೇಶ | 50 |
| | | 11) | ಮಂಗಳೂರು | ಮಂಗಳೂರು | 2502 |
| | | | | ಕುಂದಾಪುರ | 997 |
| | | | | ಕಾರ್ಕಳ | 149 |
| | | 12) | ಮೈಸೂರು | ಮೈಸೂರು | 686 |
| | | | | ಹುಣಸೂರು | 351 |
| | | | | ಮಂಡ್ಯ | 577 |
| | | 13) | ಶಿವಮೊಗ್ಗ | ಶಿವಮೊಗ್ಗ | 12642 |
| | | | | ಭದ್ರಾವತಿ | 8156 |
| | | | | ಸಾಗರ | 27067 |
| | | | | ಶಿವಮೊಗ್ಗ ವನ್ಯಜೀವಿ | 1594 |
| | | | | ಒಟ್ಟು | 88384 |
| ಆ) | ಅರಣ್ಯದಲ್ಲಿ ಬೇಟೆಯಾಡುತ್ತಿರುವುದನ್ನು ತಪ್ಪಿಸಲು ಇಲಾಖೆ ಕೈಗೊಂಡ ಕ್ರಮಗಳೇನು; ಎಷ್ಟು ಕಳ್ಳ ಬೇಟೆಗಾರರ ಮೇಲೆ ಕೇಸು ದಾಖಲಿಸಲಾಗಿದೆಯೇ;(ವಿವರ ನೀಡುವುದು) | 1. ಅರಣ್ಯದಲ್ಲಿ ಕಳ್ಳ ಬೇಟೆಯಾಡುವುದು ತಪ್ಪಿಸಲು ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಅರಣ್ಯ ವಿಭಾಗಗಳಲ್ಲಿ 414 ಕಳ್ಳಬೇಟೆ ತಡೆ ಶಿಬಿರಗಳನ್ನು ಸ್ಥಾಪಿಸಲಾಗಿದೆ.<br>2. ವಿಭಾಗವಾರು ಕಾಲಭೈರವ ಹಾಗೂ ಕ್ಷಿಪ್ರಕಾರ್ಯಾಚರಣೆ ತಂಡಗಳನ್ನು ರಚಿಸಿ ಹಗಲು ಮತ್ತು ರಾತ್ರಿ ಗಸ್ತು ತಿರುಗಾಟವನ್ನು ಹೆಚ್ಚಿಸಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗಿದೆ. | | | | |

| | | |
|---|---|---|
| | | 3. ಮೇಲಿನ ಕಳ್ಳಬೇಟೆ ತಡೆ ಶಿಬಿರ ಮತ್ತು ಗಸ್ತು ತಂಡಗಳಿಗೆ ಅಗತ್ಯವಿರುವ ಶಸ್ತ್ರಾಸ್ತ್ರಗಳು, ಗಸ್ತು ವಾಹನಗಳು ಮುಂತಾದ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ.<br>4. ಕಳ್ಳಬೇಟೆಯನ್ನು ತಡೆಯುವ ಸಲುವಾಗಿ 1972ರ ವನ್ಯಜೀವಿ ಸಂರಕ್ಷಣಕಾಯ್ದೆಯಡಿ ಪ್ರಕರಣಗಳನ್ನು ದಾಖಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.<br>5. ಕಾಡಂಚಿನ ಗ್ರಾಮಗಳಲ್ಲಿ ಗುಪ್ತ ಮಾಹಿತಿದಾರರಿಂದ ಕಳ್ಳಬೇಟೆಗಾರರ ಬಗ್ಗೆ ಗುಪ್ತ ಮಾಹಿತಿಯನ್ನು ಸಂಗ್ರಹಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.<br>6. ಅರಣ್ಯಗಳಲ್ಲಿ ಆಯ್ದ ಪ್ರದೇಶಗಳನ್ನು ಕ್ಯಾಮೆರ ಟ್ರ್ಯಾಪ್‌ಗಳನ್ನು ಅಳವಡಿಸಿ ಕಳ್ಳಬೇಟೆಗಾರರ ಚಲನವಲನಗಳನ್ನು ಗಮನಿಸಿ ಪ್ರಕರಣಗಳನ್ನು ದಾಖಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.<br>2016-17 ಮತ್ತು 2017-18ನೇ ಸಾಲಿನಲ್ಲಿ ಕ್ರಮವಾಗಿ 93 ಮತ್ತು 163 ಅರಣ್ಯ ಮೊಕದ್ದಮೆಯ ಪ್ರಕರಣಗಳನ್ನು ದಾಖಲಿಸಿದ್ದು ವೃತ್ತವಾರು ಮಾಹಿತಿಯನ್ನು ಅನುಬಂಧ-ಅ ರಲ್ಲಿ ಲಗತ್ತಿಸಿ ಸಲ್ಲಿಸಿದೆ. |
| ಇ) | "ಡೀಮ್ಡ್ ಫಾರೆಸ್ಟ್" ಸ್ಥಳಗಳಲ್ಲಿ ಯಾವುದೇ ಮರಮಟ್ಟುಗಳು ಇಲ್ಲದೇ ಇದ್ದರೂ ದಾಖಲೆಗಳಲ್ಲಿ ಮಾತ್ರ ಇರುವುದನ್ನು ಇಲಾಖೆ ಗಮನಿಸಿದೆಯೇ; ಈ ಬಗ್ಗೆ ಅರಣ್ಯ ಪ್ರದೇಶ ಅಲ್ಲದ ಸ್ಥಳಗಳಲ್ಲಿ ಅನಧಿಕೃತವಾಗಿ ಅನುಮತಿ ಪಡೆಯದೆ ವಾಸಿಸುತ್ತಿರುವವರಿಗೆ ತೊಂದರೆಗಳಾಗುವುದನ್ನು ತಪ್ಪಿಸಲು ಅರಣ್ಯ ಇಲಾಖೆ ಕೈಗೊಂಡಿರುವ ಕ್ರಮವೇನು; | ಯಾವುದೇ ಪ್ರದೇಶವನ್ನು ಡೀಮ್ಡ್ ಫಾರೆಸ್ಟ್ ಎಂದು ಪರಿಗಣಿಸುವ ಮೊದಲು ಅದನ್ನು ಜಿಲ್ಲಾ ಮಟ್ಟದ ಸಮಿತಿ ಮುಂದೆ ಮಂಡಿಸಿ, ಜಿಲ್ಲಾ ಮಟ್ಟದ ಸಮಿತಿಯು ಸರ್ಕಾರದ ಆದೇಶ ಸಂಖ್ಯೆ: ಎಫ್‌ಇಇ 185 ಎಫ್.ಎ.ಎಫ್ 2011, ದಿನಾಂಕ: 15.05.2014 ರಲ್ಲಿ ಸೂಚಿಸಿದ ಮಾನದಂಡಗಳ ಅನ್ವಯ ಗುರುತಿಸಿ ಅನುಮೋದಿಸಿದ ನಂತರ ಅದನ್ನು ಡೀಮ್ಡ್ ಫಾರೆಸ್ಟ್ ಎಂದು ಪರಿಗಣಿಸಲು ಕ್ರಮ ಕೈಗೊಳ್ಳಲಾಗುತ್ತದೆ. |
| ಈ) | ಅರಣ್ಯ ಇಲಾಖೆ ಸುಪರ್ದಿಯಲ್ಲಿರುವ ಜಂಗಲ್ ರೆಸಾರ್ಟ್ ಉದ್ದಿಮೆ ಲಾಭದಲ್ಲಿದೆಯೇ; ರಾಜ್ಯದಲ್ಲಿ ಎಷ್ಟು ರೆಸಾರ್ಟ್‌ಗಳಿವೆ; ಅವುಗಳಿಂದ ಬರುವ ಆದಾಯ ಎಷ್ಟು? (ವಿವರ ನೀಡುವುದು) | ಪ್ರವಾಸೋದ್ಯಮ ಇಲಾಖೆಯ ಅಧೀನದಲ್ಲಿರುವ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಸಂಸ್ಥೆಯು ಒಂದು ಲಾಭದಾಯಕ ಸಂಸ್ಥೆಯಾಗಿದೆ. ಕರ್ನಾಟಕದಾದ್ಯಾಂತ 18 ರೆಸಾರ್ಟ್ಸ್ ಹಾಗೂ 4 ನೇಚರ್ ಕ್ಯಾಂಪ್‌ಗಳನ್ನು ಹೊಂದಿದ್ದು 2017-18ನೇ ಸಾಲಿಗೆ ಈ ರೆಸಾರ್ಟ್ಸ್‌ಗಳಿಂದ ಬಂದಿರುವ ಒಟ್ಟು ಆದಾಯ ರೂ.54.72 ಕೋಟಿಗಳು. |

ಅಪಜೀ 80 ಎಫ್‌ಜಿಎಲ್ 2018

(ಆರ್. ಶಂಕರ್)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಅನುಬಂಧ–ಅ

| ಕ್ರಸಂ | ವೃತ್ತಗಳ ಹೆಸರು | 2016–17 | 2017–18 |
|---|---|---|---|
| 1 | ಬೆಂಗಳೂರು | 10 | 13 |
| 2 | ಬೆಳಗಾವಿ | 01 | 02 |
| 3 | ಬಳ್ಳಾರಿ | 01 | 01 |
| 4 | ಚಿಕ್ಕಮಗಳೂರು | 13 | 06 |
| 5 | ಚಾಮರಾಜನಗರ | 04 | 24 |
| 6 | ಧಾರವಾಡ | 02 | 02 |
| 7 | ಗುಲ್ಬರ್ಗ | 02 | 06 |
| 8 | ಹಾಸನ | 05 | 07 |
| 9 | ಕೊಡಗು | 07 | 06 |
| 10 | ಕೆನರಾ | 14 | 23 |
| 11 | ಮೈಸೂರು | 09 | 18 |
| 12 | ಶಿವಮೊಗ್ಗ | 09 | 29 |
| 13 | ಮಂಗಳೂರು | 06 | 10 |
| 14 | ಎಫ್‌ಡಿಪಿಟಿ ಮೈಸೂರು | 05 | 02 |
| 15 | ಎಫ್‌ಎಂಎಸ್ ಘಟಕ | 05 | 14 |
| | ಒಟ್ಟು | 93 | 163 |

ತಮ್ಮ ನಂಬುಗೆಯ,

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಜಾಗೃತ), ಬೆಂಗಳೂರು